# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ: 136

19-12-2020 ರಂದು ಶನಿವಾರ ಬೆಳಿಗ್ಗೆ 12.00 ಘಂಟೆಗೆ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ವಾರ್ಡ್ ಹಂತದ ಸಮಿತಿ ಸಭೆಯನ್ನು ಡಾ॥ ಅಲ್ಲಮಪ್ರಭು. ಸಹಾಯಕ ನಿರ್ದೇಶಕರು, (ಪಶುಪಾಲನೆ-ಪಶ್ಚಿಮ) ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 136 ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: 10-09-2020ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು. ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಅಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಡಾ. ಅಲ್ಲಮಪ್ರಭು ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಹಾಗೂ ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

ವಾರ್ಡ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡ, ಬಿಸಿಎಂ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪಂಗಡದವರಿಗೆ ಬಿ.ಬಿ.ಎಂ.ಪಿ ವತಿಯಿಂದ 2020-21ನೇ ಸಾಲಿನಲ್ಲಿ ವ್ಯಯಕ್ತಿಕ ಮನೆ ನಿರ್ಮಾಣಕ್ಕೆ ಅನುದಾನಕ್ಕೆ ತಕ್ಕಂತೆ ಫಲಾನುಭವಿಗಳನ್ನು ಗುರ್ತಿಸಲು ಪರಿಶೀಲಿಸಿ ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದೆಂದು ಹಿಂದಿನ ಸಭೆಯಲ್ಲಿ ನಿರ್ಣಯಿಸಿದ್ದು,

ಅದರಂತೆ 2020-21ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡ, ಮತ್ತು ಬಿಸಿಎಂ ಅನುದಾನದಲ್ಲಿ ಪ್ರತಿ ವಾರ್ಡ್‌ಗೆ ಪರಿಶಿಷ್ಟ ಜಾತಿ/ಪಂಗಡ ಮತ್ತು ಬಿಸಿಎಂ ಪಂಗಡದವರಿಗೆ ಪಿ. ಸಂಖ್ಯೆ: 2021 ಮತ್ತು ಪಿ. ಸಂಖ್ಯೆ: 2340 ಪ್ರತಿ ವಾರ್ಡ್‌ಗೆ 5 ಮನೆಗಳಂತೆ ಪ್ರತಿ ಮನೆಗೆ 5.00 ಲಕ್ಷಗಳನ್ನು ಮೀಸಲಿರಿಸಿದ್ದು ಸಭೆಯ ಗಮನಕ್ಕೆ ತರುತ್ತಾ ಹಾಗೂ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ಈ ಕೆಳಕಂಡ ಅರ್ಜಿದಾರರಿಗೆ ಫಲಾನುಭವಿಯೆಂದು ಗುರ್ತಿಸಲು ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ಫಲಾನುಭವಿ ಹೆಸರು<br>24.10% ಪರಿಶಿಷ್ಟ ಜಾತಿ ಪಂಗಡ ಅನುದಾನ |
|---|---|
| | |
| 1 | |
| 2 | |
| 3 | |
| 4 | |

-----2.

| ಕ್ರಮ ಸಂಖ್ಯೆ | ಫಲಾನುಭವಿ ಹೆಸರು |
|---|---|
| | ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರು |
| 1 | ಶ್ರೀ ಶಿವಮ್ಮ ನಂ. ಡಿ 114, ಭೂಮಾತಾ ಸೇವಾ ಸಂಘ, ಜನತಾ ಕಾಲೋನಿ, ಬೆಂಗಳೂರು |
| 2 | ಶ್ರೀ. ರೆಹಮತ್ ಭೀ ಕೋಂ ಸೀರಾಜ್ ನಂ. 3/1, 1ನೇ ಅಡ್ಡರಸ್ತೆ, ವಿನಾಯಕನಗರ, ಬೆಂಗಳೂರು |
| 3 | ಸುಫೀಯ ಭೀ ಬಿನ್ ಚಾನ್ ಪಾಷ, ನಂ. 1/1-4 2ನೇ ಅಡ್ಡರಸ್ತೆ, ಪಾದರಾಯನಪುರ, ಬೆಂಗಳೂರು |
| 4 | ಶ್ರೀ ಅಸ್ಲಂ ಪಾಷ ನಂ. 1 1ನೇ ಅಡ್ಡರಸ್ತೆ, ವಿನಾಯಕ ನಗರ, ಬೆಂಗಳೂರು |
| 5 | ಶ್ರೀ. ಮಹದೇವಪ್ಪ ಎಂ. ನಂ. ಚ/53 ವೀರಾಂಜನೇಯ ಸೇವಾ ಸಂಘ, ಬೆಂಗಳೂರು |

ನಿರ್ಣಯ: ಸದರಿ ಫಲಾನುಭವಿಗಳಿಗೆ 2020-21ನೇ ಸಾಲಿನಲ್ಲಿ ಅಯವ್ಯಯದಲ್ಲಿ ತುರ್ತು ಅನುಮೋದನೆ ನೀಡಿ ಸದರಿ ಫಲಾನುಭವಿಗಳಿಗೆ ಕಾರ್ಯದೇಶ ನೀಡುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು

ಅಧ್ಯಕ್ಷರು ಹಿರಿಯ ಆರೋಗ್ಯಧಿಕಾರಿಗಳಿಗೆ ಮುಂದಿನ ದಿನಗಳಲ್ಲಿ ಕೋವಿಡ್-19 ಎರಡನೇ ಹಂತ ಬರುವ ಮುನ್ಸುಚನೆಯಿದು ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು ಹಾಗೂ ಭಾರತ ಸರ್ಕಾರವು ಕೋವಿಡ್-19 ತಡೆಗಟ್ಟಲು ಲಸಿಕೆ ವಿತರಿಸುವ ಬಗ್ಗೆ ಮಾರ್ಗಸೂಚಿ ನೀಡಿದ್ದು, ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿಳಿಸಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಸದರಿ ವಿಷಯಗಳ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮವನ್ನು ಸಭೆಯಲ್ಲಿ ವಿವರಣೆ ನೀಡಿದರು.

ಅಧ್ಯಕ್ಷರು : ಪ್ರತಿ ದಿನ ಬೆಳಿಗ್ಗೆ ಬಿ.ಬಿಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕವನ್ನು ಪಡೆದು ಪ್ರತಿ ನಿತ್ಯ ಸರಿಯಾದ ಸಮಯಕ್ಕೆ ಹಾಜರಾಗದ ಕಾರ್ಮಿಕರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು

ಮಾನ್ಯ ಆಧ್ಯಕ್ಷರಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ಈ ಮೇಲ್ಕಂಡ ಪ್ರಶ್ನೆಗಳ ಬಗ್ಗೆ ಸಂಬಂಧಿಸಿದ ವಿವರಗಳನ್ನು ಅಧ್ಯಕ್ಷರ ಗಮನಕ್ಕೆ ತರುತ್ತಾ ಪ್ರತಿ ದಿನ ಪರಿಶೀಲಿಸಿ ಪೂರ್ಣ ಮಾಹಿತಿಯನ್ನು ತಮ್ಮ ಗಮನಕ್ಕೆ ತರುವುದಾಗಿ ಸಭೆಯಲ್ಲಿ ತಿಳಿಸಿದರು

----3.

ಅಧ್ಯಕ್ಷರು: ವಾರ್ಡ್ ನಂ. 136ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೂತ್ ಮಟ್ಟದ ಅಧಿಕಾರಿಗಳು (ಕೋವಡ್-19)ಹಾಜರಾತಿ ಪುಸ್ತಕವನ್ನು ಹಾಜರುಪಡಿಸುವಂತೆ ಕಂದಾಯ ಪರಿವೀಕ್ಷಕರಿಗೆ ಕೋರಿದರು.

ಕಂದಾಯ ಪರಿವೀಕ್ಷಕರು ಬೂತ್ ಮಟ್ಟದ ಅಧಿಕಾರಿಗಳ ಹಾಜರಾತಿ ಪುಸ್ತಕವನ್ನು ಸಭೆಯಲ್ಲಿ ನೀಡಿದರು ಹಾಗೂ ಎಲ್ಲಾರು ಹಾಜರಾಗಿ ಹಾಗೂ ಕೋವಿಡ್ -19 ಬಗ್ಗೆ ವಾರ್ಡ್‌ಗಳಲ್ಲಿ ಜಾಗೃತಿ ಮೂಡಿಸಿ ಪ್ರಥಮ ಮತ್ತು ದ್ವಿತಿಯ ಹಂತದ ಸೊಂಕಿತರನ್ನು ಗುರ್ತಿಸುವ ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕೋವಿಡ್-19 ಎರಡನೇ ಹಂತವನ್ನು ಸೂಕ್ಷ್ಮವಾಗಿ ನಿರ್ವಹಿಸಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತೀರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು : ಕಂದಾಯ ಪರಿವೀಕ್ಷಕರಿಗೆ ಮುಂದಿನ ದಿನಗಳಲ್ಲಿ ಬಿ.ಬಿ.ಎಂ.ಪಿ ಎಲೆಕ್ಷನ್ ಬರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲ ಮತದಾರರ ಪಟ್ಟಿ ತಿದ್ದುಪಡಿ ಮತ್ತು ನಡೆಯುವತ್ತಿರುವ ಬಗ್ಗೆ ವಿವರಣೆಯನ್ನು ಕೋರಿದರು

ಕಂದಾಯ ಪರಿವೀಕ್ಷಕರು ಡಿಸೆಂಬರ್ 18 ರವರೆಗೆ ಮತದಾರ ತಿದ್ದುಪಡಿ ಹೊಸದಾಗಿ ನಮೂನೆ-6 ಮತ್ತು ಇತರೆ ನಮೂನೆಗಳನ್ನು (ಬಿ.ಎಲ್.ಓ) ಗಳು ಪ್ರತಿ ಮನೆಗೆ ಬೇಟಿ ಮಾಡಿ ಮತದಾರರ ವಿವರವನ್ನು ಪಡೆಯುತ್ತೀರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು : ವಾರ್ಡ್ ವ್ಯಾಪ್ತಿಯಲ್ಲಿ ಬಂದಿರುವ ದೂರುಗಳನ್ನು ದೂರು ಪುಸ್ತಕದಲ್ಲಿ ಪರಿಶೀಲನೆ ನಡೆಸಿದರು ಹಾಗೂ ಸದರಿ ದೂರುಗಳನ್ನು ಬಗೆಹರಿಸಿ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ದೂರು ಪುಸ್ತಕದಲ್ಲಿರುವ ಎಲ್ಲ ದೂರುಗಳನ್ನು ಪರಿಹಾರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

---4.

ಅಧ್ಯಕ್ಷರು: ಬಿಡಬ್ಲ್ಯುಎಸ್‌ಎಸ್‌ಬಿ ಕಛೇರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಬಂದ ದೂರಿನ ಪುಸ್ತಕವನ್ನು ಪರಿಶೀಲಿಸಿದರು ಹಾಗೂ ದೂರುಗಳನ್ನು ಬಗ್ಗೆ ಹರಿಸುವ ಬಗ್ಗೆ ಸಭೆಯಲ್ಲಿ ವಿವರಿಸುವಂತೆ ಸೂಚಿಸಿದರು.

ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸಿದರು.

ಅಧ್ಯಕ್ಷರು: ಬೆಸ್ಕಾಂ ಕಛೇರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸಿದರು.

ಬೆಸ್ಕಾಂ ಅಧಿಕಾರಿಯವರು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಡಾ॥ ಅಲ್ಲಮಪ್ರಭು, ದೂ. 9480685654<br>ಸಹಾಯಕ ನಿರ್ದೇಶಕರು (ಪಶುಪಾಲನೆ ಪಶ್ಚಿಮ)<br>ಬಿ.ಬಿ.ಎಂ.ಪಿ. | ವಾರ್ಡ್‌ನ ನೋಡಲ್ ಅಧಿಕಾರಿ | |
| 2 | ಶ್ರೀ ಗಿರಿಧರ್<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 136<br>ಬಿ.ಬಿ.ಎಂ.ಪಿ ದೂ. 8618436036 | ಸದಸ್ಯ ಕಾರ್ಯದರ್ಶಿ | |
| 3 | ಗೀತಾ ಹೆಚ್. ದೂ. 9986537126<br>ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -136 | ಸದಸ್ಯರು | |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ)<br>ಜೆ.ಪಿ.ಆರ್ ನಗರ ಉಪ ವಿಭಾಗದ ಪ್ರತಿನಿಧಿ<br>ಶ್ರೀ ಬಾಬು (ಕೆಲಸ ಪರಿವೀಕ್ಷಕರು) 9342582372 | ಸದಸ್ಯರು | |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ<br>ಪ್ರತಿನಿಧಿ. ಗೀತಾ ಹೆಚ್. ದೂ. 9986537126 | ಸದಸ್ಯರು | |
| 6 | ಶ್ರೀ ಉಮೇಶ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ<br>ಪ್ರತಿನಿಧಿ ದೂ. 873557760 | ಸದಸ್ಯರು | |

| | | | |
|---|---|---|---|
| 7 | ಶ್ರೀ ಮೊಹಮದ್ ಮುಜಾಮೀಲ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ ದೂ. 7349649906 | ಸದಸ್ಯರು | |
| 8 | ಶ್ರೀಮತಿ ಚಂದ್ರಕಲಾ ದೂ. 8904845720<br>ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 136 | ಸದಸ್ಯರು | |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿಎನ್ ಗೀತಾ ಹೆಚ್. ದೂ. 9986537126 | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ ( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಹನುಮಂತ ರಾಜು 8618556909 | ಸದಸ್ಯರು | |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ ಪ್ರತಿನಿಧಿ | ಸದಸ್ಯರು | |

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 136
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು 19/12/2020
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 136

<u>ಪ್ರತಿಯನ್ನು</u>

1. ಜಂಟಿ ಆಯುಕ್ತರು ಪಶ್ಚಿಮ ರಚರ ಅವಗಾಹನೆಗೆ ಸಲ್ಲಿಸಿದೆ,
2. ಮುಖ್ಯ ಅಭಿಯಂತರರು ಪಶ್ಚಿಮ ರವರ ಮಾಹಿತಿಗೆ ಸಲ್ಲಿಸಿದೆ,
3. ಕಛೇರಿ ಕಡತಕ್ಕೆ